# 25

# ಯೇಸುವಿನ ಪ್ರಾರ್ಥನೆ ಮತ್ತು ಆತನ ಶ್ರೇಷ್ಟ ಆಹ್ವಾನ (11:25-30)

ಆತನ ಅದ್ಭುತಗಳನ್ನು ಕಣ್ಣಾರೆ ನೋಡಿದ ತರುವಾಯ ಕೂಡ ಆತನ ಬೋಧನೆಯನ್ನು ನಿರಾಕರಿಸಿದ್ದ ಈ ಪಟ್ಟಣಗಳ ಮೇಲೆ ಸಂಕಷ್ಟಗಳು ಎದುರಾಗುತ್ತವೆ ಎಂದು ಪ್ರಕಟಿಸಿದ ತರುವಾಯ, ಯೇಸು ಸಾರ್ವಜನಿಕ ಸ್ಥಳದಲ್ಲಿ ಗಟ್ಟಿಯಾಗಿ ಪ್ರಾರ್ಥನೆ ಮಾಡಿದನು ಮತ್ತು ಆತನ ಶ್ರೇಷ್ಠವಾದ ಆಹ್ವಾನ ಅವರಿಗೆ ಕೊಟ್ಟನು.

## ತಂದೆಗೆ ಆತನ ಹೊಗಳಿಕೆ (11:25-27)

**25ಆ ಸಮಯದಲ್ಲಿ ಯೇಸು ಹೇಳಿದ್ದೇನೆಂದರೆ ತಂದೆಯೇ, ಪರಲೋಕ ಭೂಲೋಕ ಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ. 26ಹೌದು, ತಂದೆಯೇ, ಹೀಗೆ ಮಾಡುವದೇ ಒಳ್ಳೇಯದೆಂದು ನಿನ್ನ ದೃಷ್ಟಿಗೆ ತೋರಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ. 27ನನ್ನ ತಂದೆಯು ಎಲ್ಲಾವನ್ನೂ ನನಗೆ ಒಪ್ಪಿಸಿದ್ದಾನೆ. ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲ; ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ.**

**ವಚನ 25. ಆ ಸಮಯದಲ್ಲಿ** ಎನ್ನುವ ವಾಕ್ಯಭಾಗವು ಈ ವಚನಗಳನ್ನು ಮುಂದಿನ ವಾಕ್ಯಭಾಗಕ್ಕೆ ಜೋಡಿಸುತ್ತದೆ. ಆತನು ಆ ಸ್ಥಳಗಳಲ್ಲಿ ಎಲ್ಲಾ ಅದ್ಭುತಗಳನ್ನು ಮಾಡಿದ ನಂತರ ಮತ್ತು ಬೋಧನೆ ಮಾಡಿದ ನಂತರವೇ - ಆ ಕ್ಷೇತ್ರಕ್ಕೆ ಕ್ರಿಸ್ತನು ಕೊಟ್ಟಿರುವ ಕೊನೆಯ ಆಹ್ವಾನ ಇದಾಗಿರಬಹುದು.

ಅಲ್ಲಿದ್ದ ಜನರ ಗುಂಪು ಕೇಳಿಸಿಕೊಳ್ಳುವದು ಯೇಸುವಿನ ಪ್ರಾರ್ಥನೆಯ ಉದ್ದೇಶವಾಗಿತ್ತು (11:25-27). ಲೂಕನು ಈ ಪ್ರಾರ್ಥನೆಯನ್ನು ಎಪ್ಪತ್ತು ಜನರು ಮಿತವಾದ ಸೇವೆಗೆ ಹೋಗಿ ಹಿಂತಿರುಗಿ ಬರುವ ಸಂದರ್ಭದಲ್ಲಿ ಅದನ್ನು ದಾಖಲಿಸಿದ್ದಾನೆ (ಲೂಕ 10:17, 21, 22).

ಆತನ ಪ್ರಾರ್ಥನೆ ಯಾವ ವಿಷಯಗಳನ್ನು ಒಳಗೊಂಡಿದೆ? ಮೊದಲನೆಯದಾಗಿ, ಆತನು **ತಂದೆಯೇ** ಎಂದು ಆತನಿಗೆ ಸ್ತೋತ್ರ ಹೇಳುತ್ತಿದ್ದಾನೆ. ದೇವರೊಂದಿಗೆ ಯೇಸುವಿಗಿರುವ ಅಸಾಧಾರಣವಾದ ಸಂಬಂಧ ಮತ್ತು ಆತನ ದೈವತ್ವದ ಬಗ್ಗೆ ಗಮನಕೊಡಲು ಕರೆದರು (ನೋಡಿರಿ ಯೋಹಾನ 5:18; 10:30). ಎರಡನೆಯದಾಗಿ, ಆತನು ದೇವರು ಸಾರ್ವಭೌಮತ್ವವನ್ನು ಒತ್ತಿ ಹೇಳುತ್ತಾ, **ಪರಲೋಕ ಭೂಲೋಕಗಳ ಒಡೆಯನೇ** ಎಂದು ಕರೆಯುತ್ತಿದ್ದಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 17:24). ಮೂರನೆಯದಾಗಿ, ಆತನು ದೇವರ ರಕ್ಷಣೆಯು ಆತನು ಒದಗಿಸಿರುವಂಥದ್ದಾಗಿದೆ ಹೊರತು ಜನರ ಯೋಜನೆಗಳಿಂದಾಗಲಿ, ಉದ್ದೇಶ, ಅಥವಾ ಅವರ ಬಲದಿಂದಾಗಲಿ ಬಂದಿರುವಂಥದ್ದಲ್ಲ ಎಂದು ಆತನು ಹೇಳಿದ್ದಾನೆ. **ಜ್ಞಾನಿಗಳಿಗೂ** ಮತ್ತು **ಬುದ್ಧಿವಂತರಿಗೂ** ಮತ್ತು **ಬಾಲಕರ** ಮಧ್ಯಯಿರುವ ವ್ಯತ್ಯಾಸ

ಬುದ್ಧಿವಂತಿಕೆಗೆ ಸಂಬಂಧಿಸಿರುವದಲ್ಲ ಆದರೆ ಅದು ನಡತೆಗೆ ಸಂಬಂಧಿಸಿದ್ದಾಗಿದೆ; ಇದುವೆ ತಮ್ಮ ಮೇಲೆ ಆತುಗೊಂಡವರಿಗೂ ಮತ್ತು ದೇವರ ಮೇಲೆ ಆತುಕೊಂಡವರ ಮಧ್ಯ ಇರುವ ವ್ಯತ್ಯಾಸವಾಗಿದೆ (18:1-4; 21:15, 16; 1 ಕೊರಿಂಥ 1:18-31). "ಬುದ್ಧಿವಂತರು ಮತ್ತು ಜ್ಞಾನಿಗಳು" ತಮ್ಮನ್ನು ತಾವೇ ರಕ್ಷಿಸಿಕೊಳ್ಳುತ್ತೇವೆ ಎಂದು ಅಥವಾ ರಕ್ಷಣೆ ಹೊಂದುವ ಅವಶ್ಯಕತೆ ಅವರಿಗಿಲ್ಲವೆಂದು ಯೋಚಿಸುವವರಾಗಿದ್ದಾರೆ. "ಬಾಲಕರು" ಆತ್ಮೀಕವಾಗಿ ಇರುವವರು ಆತನ ಮೇಲೆ ಆತುಕೊಳ್ಳುವರು. ಇವರು "ಆತ್ಮದಲ್ಲಿ ಬಡವರಂತೆ" ಆತನ ಮುಂದೆ ತಮ್ಮನ್ನು ತಗ್ಗಿಸಿಕೊಳ್ಳುವವರಾಗಿದ್ದಾರೆ (5:3).

**ವಚನ 26.** ದೇವರು ತನ್ನ ಸತ್ಯವನ್ನು "ಬುದ್ಧಿವಂತರಿಂದ" ಮರೆಮಾಡಿ ಅದನ್ನು "ಬಾಲಕರಿಗೆ" ಪ್ರಕಟಿಸಿದ ದೇವರ ಸಾರ್ವಭೌಮ ಕೋರಿಕೆಯನ್ನು ಒತ್ತಿ ಹೇಳಿ ಯೇಸು ಆಳವಾದ ಪ್ರಾರ್ಥನೆ ಮಾಡುವದರ ಮುಖಾಂತರ ಮುಕ್ತಾಯ ಮಾಡಿದನು. **ಹೌದು, ತಂದೆಯೇ, ಹೀಗೆ ಮಾಡುವದೇ ಒಳ್ಳೇಯದೆಂದು ನಿನ್ನ ದೃಷ್ಟಿಗೆ ತೋರಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ** ಎಂದು ಹೇಳಿದನು. ನಿಶ್ಚಿಯವಾಗಿ, "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ" (ಯಾಕೋಬ 4:6). ಅಹಂಕಾರಿಗಳ ವಿರೋಧವಾಗಿ ನಿಂತು ದೇವರು ಜಜ್ಜಿಹೋದ ದೀನಮನದೊಂದಿಗೆ ನಿಂತುಕೊಂಡು ಆತನ ಮನಸ್ಸನು ಉಜ್ಜೀವನ ಮಾಡುವನು (ಯೆಶಾಯ 57:15).

ಅನೇಕ ಯೆಹೂದ್ಯರು, ವಿಶೇಷವಾಗಿ ಯೆಹೂದ್ಯ ನಾಯಕರು, ಯೇಸುವನ್ನು ನಿರಾಕರಿಸಿದರು. ಈ ವಾಸ್ತವವನ್ನು ಯೇಸುವಿನ ವಿರುದ್ಧವಾಗಿ ಗಟ್ಟಿ ಹೊಡೆತವೆಂದು ತೆಗೆದುಕೊಳ್ಳಬಾರದು. ಈ ನಿರಾಕರಿಸುವಿಕೆ ದೇವರ ಯೋಜನೆ ಮತ್ತು ಉದ್ದೇಶದ ಒಂದು ಭಾಗವಾಗಿದೆ. ಅದಕ್ಕಾಗಿ, ಆತನು ಕ್ರಿಸ್ತನು, ದೇವರ ಕುಮಾರನು, ಎಂದು ಗುರುತಿಸಿರುವ ಸತ್ಯವನ್ನು ಯಾವುದೇ ಕಾರಣಕ್ಕೂ ಅದನ್ನು ಕುಗ್ಗಿಸಲು ಸಾಧ್ಯವಿಲ್ಲ.

**ವಚನ 27.** ಆತನು ತನ್ನ ಪ್ರಾರ್ಥನೆಯನ್ನು ಜನರಿಗೆ ವಿವರಿಸುತ್ತಾ, ತಂದೆಯೂ ಎಲ್ಲವನ್ನು ತಿಳಿಸಿಕೊಡಬೇಕಾಗಿರುವದನ್ನು ತನ್ನ ಮಗನ ಮುಖಾಂತರ ಎಲ್ಲಾವನ್ನು ಪ್ರಕಟಿಸಲು ಆರಿಸಿಕೊಂಡನು ಎಂದು ಯೇಸು ಹೇಳಿದನು. "ದೇವರನ್ನು ಯಾರು ಎಂದೂ ಕಂಡಿಲ್ಲ; ಯಾವನು ಏಕಪುತ್ರನು ಸ್ವತಃ ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು" ಎಂದು ಸತ್ಯವನ್ನು ಯೋಹಾನನು ಹೇಳಿದ್ದಾನೆ (ಯೋಹಾನ 1:18). ಯೇಸು ಸ್ವತಃ ಹೇಳಿದ್ದಾನೆ,

> ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ ... ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆ ಎಂದು ನೀನು ನಂಬುವದಿಲ್ಲವೋ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಷ್ಟಕ್ಕೆ ನಾನೇ ಆಡುವದಿಲ್ಲ; ತಂದೆಯು ನನ್ನಲ್ಲಿ ಇದ್ದುಕೊಂಡು ತನ್ನ ಕ್ರಿಯೆಗಳನ್ನು ನಡಿಸುತ್ತಾನೆ. ನಾನು ತಂದೆಯಲ್ಲಿ ಇದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆಂಬುವ ನನ್ನ ಮಾತನ್ನು ನಂಬಿರಿ; ಇಲ್ಲದಿದ್ದರೆ ಆ ಕ್ರಿಯೆಗಳನ್ನೇ ನೋಡಿ ನನ್ನ ಮಾತನ್ನು ನಂಬಿರಿ (ಯೋಹಾನ 14:9-11).

## ಸರ್ವಜನರಿಗೂ ಆತನ ಆಹ್ವಾನ (11:28-30)

**[28]ಎಲ್ಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಒಳಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು. [29]ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿಸಿಕ್ಕುವದು. [30]ಯಾಕಂದರೆ ನನ್ನ ನೊಗವು ಮೃದುವಾದದ್ದು;**

**ನನ್ನ ಹೊರೆಯು ಹೌರವಾದದ್ದು ಅಂದನು.**

**ವಚನ 28.** ಪ್ರಾರ್ಥನೆ ಮತ್ತು ಅದರ ವಿವರಣೆ ಮಾಡಿದ ನಂತರ ಕರ್ತನು ಆಹ್ವಾನ ಮಾಡುತ್ತಿರುವದು ಕೇವಲ ಇಲ್ಲಿ ಮಾತ್ರ ಕಾಣಿಸುತ್ತದೆ (11:28-30). ದೇವರ ವಾಕ್ಯದಲ್ಲಿ ಯೇಸು ಇನ್ನೂ ಇತರೆ ಆಹ್ವಾನವನ್ನು ಕೊಟ್ಟಿದ್ದಾನೆ, ಅದರಲ್ಲಿ ಇಂಥಹದ್ದೇ ಶಬ್ದಗಳು ಇರುವದಿಲ್ಲ. ಆಹ್ವಾನವು ಇದು ಸರ್ವರಿಗೂ ಮುಟ್ಟುತ್ತದೆ, ಇದರ ವಾಕ್ಯಭಾಗದಲ್ಲಿ ಈ ಆಹ್ವಾನವು ಧರ್ಮಶಾಸ್ತ್ರಕ್ಕೆ ಅಧೀನರಾಗಿ, ಅದಕ್ಕೆ ಆಳಾಗಿ ದುಡಿದವರಂತೆ ಕಾಣುವ ಯೆಹೂದ್ಯರ ಕುರಿತಾಗಿ ಇದು ಅರ್ಥೈಸುತ್ತದೆ ಮತ್ತು ಮನುಷ್ಯರು ಮಾಡಿದ ಮತಧರ್ಮಕ್ಕೆ ತನ್ನ ಜನಾಂಗವು ಅದಕ್ಕೆ ಬದ್ಧರಾಗಿರಲು ಒತ್ತಾಯ ಪಡಿಸುವ ಅರ್ಥಕೊಡುತ್ತದೆ.

**ನನ್ನ ಒಳಗೆ ಬನ್ನಿರಿ** ಎಂದು ಯೇಸು ಹೇಳಿದಾಗ, ಜನರು ನಂಬಿಕೆಯಿಂದ ಮತ್ತು ವಿಧೇಯತೆಯಿಂದ ತನ್ನ ಕಡೆಗೆ ದೀನತೆಯಿಂದ ಬರುವದಕ್ಕಾಗಿ ಆಹ್ವಾನಿಸುತ್ತಿದ್ದಾನೆ. ಜನರು ಆತನ ಮುಖಾಂತರ ತಂದೆಯ ಬಳಿಗೆ ಬರಬೇಕು (ಯೋಹಾನ 14:6), ಮತ್ತು ರಕ್ಷಣೆಗೆ ಬೇರೆ ಮಾರ್ಗವು ಇರುವದಿಲ್ಲ (ಯೋಹಾನ 6:37, 60-69; ಅಪೊಸ್ತಲರ ಕೃತ್ಯಗಳು 4:12).

ಆತನ ಕೇಳುಗರಲ್ಲಿರುವ **ಎಲ್ಲರನ್ನು** ಆಹ್ವಾನಿಸಿದನು. ಕೊನೆಯದಾಗಿ, ಆತನ ಆಹ್ವಾನ "ಪ್ರಪಂಚದ ಎಲ್ಲಾ ದೇಶಗಳಿಗೆ" ಇದೆ (28:19; ಮಾರ್ಕ 16:15), ಎಲ್ಲಾ ಕಾಲದಲ್ಲಿ ಉಳಿದುಕೊಂಡಿರುವ ಜನರಿಗೆ ರಕ್ಷಣೆಯ ಆಹ್ವಾನ ಕೊಡುವದನ್ನು ಇದು ಸೂಚಿಸುತ್ತದೆ. ಇದು ಎಲ್ಲಾ ಜನರಿಗೂ ಒಂದೇ ಮೂಲ ತತ್ವದ ಆಧಾರದ ಮೇಲೆ ಕರೆಯಲಾಗಿದೆ: ಯೆಹೂದ್ಯರಿಗೂ ಮತ್ತು ಅನ್ಯರಿಗೂ, ಪುರುಷನಿಗೂ ಮತ್ತು ಸ್ತ್ರೀಗೂ, ಗುಲಾಮನಿಗೂ ಮತ್ತು ಸ್ವತಂತ್ರ್ಯ ಮನುಷ್ಯನಿಗೂ, ಒಂದೇ ರೀತಿಯಾಗಿ ಕರೆಯಲಾಗಿದೆ (ರೋಮಾಪುರ 1:16; ಗಲಾತ್ಯ 3:26-29). ದೇವರು ಕೇಳಿಕೊಂಡ ಹಾಗೆ ಆತನ ಹತ್ತಿರ ಬರುವ ಯಾವನ್ನಾದರು ಹಿಂದಕ್ಕೆ ಕಳುಹಿಸಿಕೊಡುವದಿಲ್ಲ.

**ಕಷ್ಟಪಡುವವರಿಗೆ ಹೊರೆಹೊತ್ತವರಿಗೆ** ಯೇಸು ಆಹ್ವಾನಿಸಿದನು. ದೇವರನ್ನು ತಮ್ಮ ಸ್ವಂತ ಕಾರ್ಯಗಳಿಂದ ಮೆಚ್ಚಿಸಲು ಪ್ರಯತ್ನಿಸುವಂತಾಹವರು ದಣಿದುಹೋಗುವರು. "ಕಷ್ಟ" ಇದು ಅಂತರದ ಬಳಲಿಕೆಯನ್ನು ತೋರಿಸುತ್ತದೆ, ಹಾಗೆಯೇ, "ಹೊರೆ ಹೊತ್ತವರೇ" ಎನ್ನು ವಾಗ ಹೊರಗಡೆಯ ಕಷ್ಟಗಳನ್ನು ಸೂಚಿಸುತ್ತದೆ. ಕೆಲವು ಜನರು ತಮ್ಮ ಪುಣ್ಯಕ್ರಿಯೆಗಳಿಂದ ಬಾರವಾದ ಕಾರ್ಯಗಳಿಂದ ನೀತಿಯ ಕಾರ್ಯಗಳ ಮುಖಾಂತರ ರಕ್ಷಣೆ ಹೊಂದಲು ಪ್ರಯತ್ನಿಸುತ್ತಾರೆ (ನೋಡಿರಿ ತೀತ 3:5). ಯೇಸು ಫರಿಸಾಯನಿಗೆ ಹೀಗೆ ಹೇಳಿದನು, "ಅವರು ಬಾರವಾದ ಹೊರೆಗಳನ್ನು ಕಟ್ಟಿ ಜನರ ಹೆಗಲಿನ ಮೇಲೆ ಹೋರಿಸುತ್ತಾರೆ; ತಾವಾದರೋ ಬೆರಳಿನಿಂದಲಾದರೂ ಅವುಗಳನ್ನು ಮುಟ್ಟಲೋಲ್ಲರು" (23:4).

ಆತನಲ್ಲಿಗೆ ಬರುವವರಿಗೆ **ನಾನು ನಿಮಗೆ ವಿಶ್ರಾಂತಿ ಕೊಡುತ್ತೇನೆಂದು** ಕ್ರಿಸ್ತನು ಹೇಳಿದನು. "ವಿಶ್ರಾಂತಿ ಕೊಡುತ್ತೇನೆ" (*anapausis*) ಎನ್ನುವದು "ದಣಿವಾರಿಸು," "ಪುನರುಜ್ಜೀವಿತಗೊಳ್ಳು" ಅಥವಾ "ಉಪಶಮನ" ಇವೆಲ್ಲವುಗಳು ಬಹಳ ಕಷ್ಟಪಟ್ಟು ಕೆಲಸಮಾಡಿದ ತರುವಾಯ ಅಥವಾ ಪ್ರಯಾಣದ ನಂತರ ಆಗುವಂಥವುಗಳು. "ವಿಶ್ರಾಂತಿ" ಎನ್ನುವದು ಹಳೆ ಒಡಂಬಡಿಕೆಯಲ್ಲಿ ಸಾಮಾನ್ಯವಾದ ವಿಷಯವಾಗಿದೆ. ಅದು ಹೊಸ ಒಡಂಬಡಿಕೆಯಲ್ಲಿ ದೇವರ ಮಕ್ಕಳಿಗೆ ವಾಗ್ದಾನವಾಗಿ ಉಳಿದುಕೊಂಡಿದೆ (ಕೀರ್ತನೆ 95:7-11; ಇಬ್ರಿಯ 4:1-11).

**ವಚನ 29. ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಳ್ಳಿರಿ** ಎಂದು ಯೇಸು ತನ್ನ ಕೇಳುಗರಿಗೆ ಹೇಳಿದನು. ಒಂದು ನೋಗವನ್ನು ಪ್ರಾಣಿಗಳನ್ನು ಒಟ್ಟಾಗಿ ಸೇರಿಸಿ ಕಟ್ಟಲು ಉಪಯೋಗಿಸುತ್ತಿದ್ದರು. ಹಿಂದಿನ ಕಾಲದಲ್ಲಿ ಒಪ್ಪಿಸಿಕೊಡುವದಕ್ಕಾಗಿ ರೂಪಕಾಲಂಕಾರವಾಗಿತ್ತು (ಧರ್ಮೋಪದೇಶಕಾಂಡ 28:48; ಯೆರೆಮೀಯ 27:1-11;

ಪ್ರಲಾಪಗಳು 1:14). ಪೌಲನು ಧರ್ಮಶಾಸ್ತ್ರವನ್ನು "ನೊಗವೆಂದು" ಕರೆದನು (ಗಲಾತ್ಯ 5:1), ಮತ್ತು ಪೇತ್ರನು ಇದನ್ನು "ನಮ್ಮ ಪಿತೃಗಳಾಗಲಿ ನಾವಾಗಲಿ ಹೊರಲಾರದ ಹೊರೆಯಾಗಿದೆ" ಎಂದನು (ಅಪೊಸ್ತಲರ ಕೃತ್ಯಗಳು 15:10).[1]

ತರುವಾಯ, ಯೇಸು **ನನ್ನಲ್ಲಿ ಕಲಿತುಕೊಳ್ಳಿರಿ** ಎಂದನು. "ಕಲಿ" (*manthanō*) ಎಂದು ಅನುವಾದಿಸಿರುವ ಗ್ರೀಕ್ ಕ್ರಿಯಾಪದ "ಶಿಷ್ಯ" (*mathētēs*) ಎಂದು ಕರೆಯುವದಕ್ಕೆ ಬಹಳ ಹತ್ತಿರವಾಗಿ ಸಂಬಂಧಿಸಿದೆ. ಕ್ರಿಸ್ತನ ಶಿಷ್ಯರು ಕಲಿಯುವವರು; ಆತನಿಂದ ಅವರು ಕಲಿತುಕೊಳ್ಳಬೇಕಾಗಿತ್ತು (ನೋಡಿರಿ 28:19).

ಯೇಸು ತರುವಾಯ ತನ್ನ ಸ್ವಾಭಾವವನ್ನೆ ವಿವರಿಸುತ್ತಾ, **ನಾನು ಸಾತ್ವಿಕನು ಮತ್ತು ದೀನ ಮನಸ್ಸುಳವನು** ಎಂದು ಹೇಳಿದನು. ಯೇಸುವಿನ "ಸಾತ್ವಿಕತೆ" ಮತ್ತು "ದೀನತೆ"ಯು ಆತನನ್ನು ಎದುರಿಸಿದ ಫರಿಸಾಯನ ಗರ್ವ ಮತ್ತು ಜಂಬದ ಸ್ವಾಭಾವಕ್ಕೆ ವಿರುದ್ಧವಾಗಿದೆ. ನರಳಾಡುವ ಸೇವಕನ ಧ್ವನಿಯೆಂದು ಯೆಶಾಯನಲ್ಲಿ (ನೋಡಿರಿ ಯೆಶಾಯ 42:2-4; 53) ಹೇಳಿದ್ದು ಯೇಸುವಿನ ಹೇಳಿಕೆಯಲ್ಲಿ ಕೇಳಿಸಿಕೊಳ್ಳಬಹುದು. ಆತನು ವಾಕ್ಯವನ್ನು ನೆರವೇರಿಸುತ್ತಾನೆ ಎನ್ನುವದಕ್ಕೆ ಆಧಾರ ಕೊಡುವಂಥದ್ದಾಗಿದೆ.[2]

"ಸಾತ್ವಿಕನು" (*praus*) ಎನ್ನುವ ಶಬ್ದವನ್ನು ನಮ್ರತೆ (KJV) ಎಂದು ಸಹ ಅನುವಾದಿಸಲಾಗಿದೆ. ಈ ಪದವನ್ನು ಸೆಪ್ಟಂಜೆಂಟಿನಲ್ಲಿ ದೇವರ ಸೇವಕನಾದ ಮೊಶೆಯನ್ನು ವರ್ಣಿಸಲು ಉಪಯೋಗಿಸಲಾಗಿದೆ (ಅರಣ್ಯಕಾಂಡ 12:3). ಕ್ರಿಸ್ತನು ರಾಜನಂತೆ ಯೆರೂಸಲೇಮನ್ನು ಪ್ರವೇಶಿಸುವಾಗ ಮತ್ತಾಯನು ಜೆಕರ್ಯ 9:9 ರಿಂದ ತೆಗೆದುಕೊಂಡು ತನ್ನ ಹೇಳಿಕೆಯಲ್ಲಿ ಕ್ರಿಸ್ತನನ್ನು ವರ್ಣಿಸಲು ಈ ಪದವನ್ನು ಉಪಯೋಗಿಸಿದ್ದಾನೆ: "ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ, ಆತನು ಶಾಂತಗುಣವುಳ್ಳವನಾಗಿಯೂ ಕತ್ತೆಯನ್ನು ಏರಿ ಬರುತ್ತಾನೆ" (21:5). ಪೌಲನು "ಕ್ರಿಸ್ತನ ಶಾಂತಮನಸ್ಸು ಮತ್ತು ಸಾತ್ವಿಕತ್ವದ" ಕುರಿತು ಬರೆದಿದ್ದಾನೆ (2 ಕೊರಿಂಥ 10:1). ಪರ್ವತ ಪ್ರಸಂಗದಲ್ಲಿ, ಯೇಸು ಈ ಗುಣ ಹೊಂದಿದವರು ಆಶೀರ್ವಾದ ಹೊಂದುವರು ಎಂದು ಹೇಳಿದನು (ನೋಡಿರಿ 5:5ರ ಮೇಲಿನ ವ್ಯಾಖ್ಯಾನ).

ಆತನು ಹಿಂದೆ ಹೇಳಿರುವ ಶಬ್ದಗಳೊಂದಿಗೆ ಹೊಂದಿಕೆಯಿರುವಂತೆ, "ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು" ಎಂದು ಕ್ರಿಸ್ತನ ವಾಗ್ದಾನ ಮಾಡಿದ್ದಾನೆ. ಹಳೆ ಒಡಂಬಡಿಕೆಯಲ್ಲಿ, ಕರ್ತನು ತನ್ನ ಜನರಿಗೆ ಅದೆ ರೀತಿಯ ವಾಗ್ದಾನವನ್ನು ಕೊಡುತ್ತಾ "ಪುರಾತನ ಮಾರ್ಗಗಳಿಗೆ" ಹಿಂತಿರುಗಿ ಎಂದು ಆಹ್ವಾನಿಸುತ್ತಾನೆ (ಯೆರೆಮೀಯ 6:16). ಇಲ್ಲಿ ಉಪಯೋಗಿಸಿರುವ ಭಾಷೆಯನ್ನು ವಾಕ್ಯಭಾಗದಿಂದ ತೆಗೆದುಕೊಂಡಿರಬಹುದು.

**ವಚನ 30.** ಯೇಸು ತನ್ನ ಆಹ್ವಾನವನ್ನು ವಾಗ್ದಾನದೊಂದಿಗೆ ಮುಕ್ತಾಯಮಾಡುತ್ತಾನೆ: **ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು.** "ಮೃದುವಾದದ್ದು" (*chrēstos*) ಎಂದು ಅರ್ಥಕೊಡುವ ಗ್ರೀಕ್ ಪದವು "ಒಪ್ಪುವ," "ಮಧುರವಾದ" ಅಥವಾ "ಕರುಣೆ" ಎಂಬುದಾಗಿಯೂ ಸಹ ಅನುವಾದಿಸಬಹುದಾಗಿದೆ. ಈ ಆಲೋಚನೆಯು "ಸರಿಯಾದ ಜೋಡಣೆ" ಯಾಗಿರುತ್ತದೆ. ಈ ನೊಗವೆನ್ನುವ ವಿಷಯ ಪ್ರಾಣಿಗಳಿಗೆ ಅದು ಸರಿಹೊಂದದ ಮತ್ತು ಕಿರಿಕಿರಿಯುಂಟು ಮಾಡುವಂಥದ್ದಾಗಿದೆ. ಯೇಸುವಿನ ನೊಗ ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಸರಿಹೊಂದುವ ಸುರಕ್ಷತೆಯನ್ನು ಒದಗಿಸುವ ನೊಗವಾಗಿದೆ.

ಯೆಹೂದ್ಯರ ಧಾರ್ಮಿಕತೆಯ ಕಠಿಣವಾದ ಸಂಪ್ರದಾಯಕ್ಕೆ ಭಿನ್ನವಾಗಿ, ಯೇಸುವಿನ ನಿಯಮಗಳು ನಿಷ್ಕಪಟ ಮತ್ತು ಸರಳವಾಗಿವೆ (1 ಯೊಹಾನ 5:3). ದೇವರ ವಾಕ್ಯದಲ್ಲೆಲ್ಲಾ ಮುಂದುವರಿದು ಬಲವಾಗಿ ಬೆಳೆದಿರುವ ಕಠಿಣವಾದ ಸಂಪ್ರದಾಯಗಳನ್ನು ಆತನು ಮುರಿದನು ಮತ್ತು ಹೃದಯದ ನಿಯಮಕ್ಕೆ ತನ್ನ ಶಿಷ್ಯರಿಗೆ ಮಾರ್ಗದರ್ಶನ ಮಾಡಿದನು ಮತ್ತು ಜನರೊಂದಿಗೆ ದೇವರ ಸಂಬಂಧದ ಒಪ್ಪಂದವನ್ನು ಸ್ಥಿರವಾಗಿರುವದೆಂದು ಹೇಳುತ್ತಾ ಅದರ

ಉದ್ದೇಶದ ಕಾರ್ಯವನ್ನು ಮಾಡುವಂತೆ ಮಾರ್ಗದರ್ಶನ ಮಾಡಿದನು. ಆತನ ಕೇಳುಗರಿಗೆ ತನ್ನ ಕೊಡುಗೆಯನ್ನು ಅಂಗಿಕರಿಸಲು ಯೇಸು ಆಹ್ವಾನಿಸುತ್ತಿದ್ದನು.

### ಪಾಠಗಳು

## ಆಹ್ವಾನ (11:28-30)

ನಾವು ಬರುವಂತೆ ಯಾರು ಆಹ್ವಾನಿಸುತ್ತಿದ್ದಾರೆ, ಮತ್ತು ನಿಜವಾಗಿಯೂ ಏನನ್ನು ಪ್ರವೇಶಿಸಲು ನಮಗೆ ಆಹ್ವಾನಿಸುತ್ತಿದ್ದಾನೆ? ಯೇಸು ನಮ್ಮನ್ನು ಸ್ನೇಹ ಬದ್ಧವುಳ್ಳ, ವೈಯಕ್ತಿಕ ಸಂಬಂಧವನ್ನು ಹೊಂದಲು ಆಹ್ವಾನಿಸುತ್ತಿದ್ದಾನೆ. "ನನ್ನ ಬಳಿಗೆ ಬನ್ನಿರಿ" ಎಂದು ಹೇಳಿದನು. ಈ ಆಹ್ವಾನವು ಬಹಳ ಹತ್ತಿರವಾದ ವೈಯಕ್ತಿಕವಾದ ಆಹ್ವಾನವಾಗಿದೆ, "ಎಲ್ಲರು ಸಹ ಬರಬಹುದು" ಎಂದು ಹೇಳುತ್ತಾನೆ. ಆತನು ಆಯಾಸಗೊಂಡವರನ್ನು ಮತ್ತು ಕಾರ್ಯ ನಿರತರನ್ನು ಚಟುವಟಿಕೆಯುಳ್ಳವರನ್ನು ಆಹ್ವಾನ ಮಾಡುತ್ತಿದ್ದಾನೆ. ಆತನು ಹೊರೆ ಹೊತ್ತವರನ್ನು ಯಾರ ಜೀವಿತ ಶ್ರಮದಿಂದ ಕೂಡಿದೆಯೋ ಅಂಥವರನ್ನು ಆಹ್ವಾನಿಸುತ್ತಾನೆ. ಬಹುಶಃ ಒಬ್ಬರು ತನ್ನ ದೀರ್ಘಕಾಲದಿಂದ ಮಾಡುವ ಉದ್ಯೋಗದ ನಿಮಿತ್ತ ತೃಪ್ತಿ ಹೊಂದದೆ ಇರಬಹುದು. ಇನ್ನೊಬ್ಬನ ವಿವಾಹವು ಗುರಿಮುಟ್ಟದೆ ಇರಬಹುದು. ವೃದ್ಧ ವ್ಯಕ್ತಿಯ ಆರೋಗ್ಯ ಹಾಳಾಗಿರಬಹುದು, ಅಥವಾ ಯೌವನಸ್ಥ ಸ್ತ್ರೀ ತನ್ನ ನೀತಿಯ ನಿಯಮಗಳನ್ನು ರಾಜಿ ಮಾಡಿಕೊಂಡಿರಬಹುದು. ಯೇಸುವಿನ ಆಹ್ವಾನ ಅದು ಎಲ್ಲಾ ರೀತಿಯ ಜನರಿಗೆ ಕಟುವಾಗಿ ಟೀಕೆಗೆ ಒಳಗಾಗದವರು, ಹೊಡೆಸಿಕೊಂಡಂಥವರು, ಮತ್ತು ಬಾರಹೊತ್ತವರಿಗೆ ಇದೆ. ವಿಶ್ರಾಂತಿ ಕಂಡುಕೊಳ್ಳಲು ನಮ್ಮನ್ನು ಆಹ್ವಾನಿಸುತ್ತಿದ್ದಾನೆ. ಈ ವಿಶ್ರಾಂತಿ ಕೇವಲ ದೈಹಿಕವಾಗಿ ದಣಿವಾರಿಸಿಕೊಳ್ಳುವದಲ್ಲ, ಆದರೆ ನಾವು ಹೊತ್ತಿರುವ ಆತ್ಮೀಕ ಬಾರದಿಂದ ಬಿಡುಗಡೆ ಹೊಂದುವದಕ್ಕಾಗಿ ಆಹ್ವಾನಿಸುತ್ತಿದ್ದಾನೆ. ಆತನು ನಮ್ಮ ಮೇಲೆ ಹಾಕಿರುವ ಬಾರವು "ಮೃದು"ವಾದದ್ದು ಯಾಕೆಂದರೆ ಕರೆದಾತನು ಯಾರಾಗಿದ್ದಾನೋ ಆತನು ಅದೇ ರೀತಿಯಾಗಿ ಇದ್ದಾನೆ. ಆತನು ಹೃದಯದಲ್ಲಿ ಸಾತ್ವಿಕನೂ ಮತ್ತು ದೀನ ಮನಸ್ಸುಳವನೂ ಆಗಿದ್ದಾನೆ.

## ನಾವು ಹೊತ್ತುಕೊಂಡಿರುವ ಬಾರಗಳು (11:28-30)

ಜೀವನದುದ್ದಕ್ಕೂ ನಾವು ಪ್ರಯಾಣಿಸುವಾಗ ನಾವು ಅನೇಕ ಬಾರಗಳನ್ನು ನಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಿರುತ್ತೇವೆ. ನಮಗೆ ಹಿಂದೆ ಆಗಿರುವ ವಿಷಾದದ ಸಂಗತಿಗಳು, ಸದ್ಯದ ಚಿಂತೆಗಳು ಮತ್ತು ವರ್ತಮಾನಕ್ಕೆ ಸಂಬಂಧಪಟ್ಟ ಕಷ್ಟಗಳಿವೆ. ನಮ್ಮ ಜೀವಿತವು ಒತ್ತಡದ ಜೀವಿತವಾಗಿದೆ. ನಮ್ಮ ಬಾರಗಳನ್ನು ಕಡಿಮೆ ಮಾಡಿಕೊಳ್ಳಲು ದೇವರು ನಮಗೆ ಎರಡು ಮಾರ್ಗಗಳನ್ನು ಕೊಟ್ಟಿದ್ದಾನೆ. ಮೊದಲನೆಯದು, ಎಲ್ಲಾ ಬಾರಗಳನ್ನು ಆತನಿಗೆ ಕೊಡುವದು (1 ಪೇತ್ರ 5:7; ನೋಡಿರಿ ಕೀರ್ತನೆ 55:22). ಎರಡನೆಯದು, ನಾವು ಒಂದು ದಿನದಲ್ಲಿ ನಿರ್ವಹಣೆ ಮಾಡುವದಕ್ಕಿಂತ ಹೆಚ್ಚಾದವುಗಳ ಮೇಲೆ ಕೇಂದ್ರಿಕರಿಸದೆ ನಾವು ಪ್ರಜ್ಞೆಯುಳ್ಳವರಾಗಿ ಪ್ರಯತ್ನಿಸಬೇಕು (ಮತ್ತಾಯ 6:34).

---

ಟಿಪ್ಪಣಿಗಳು

[1]**ನೋಡಿರಿ** Sirach 51:26; Mishnah *Aboth* 3.5; *Berakoth* 2.2. [2]**ನೋಡಿರಿ** Donald A. Hagner, *Matthew 1—13,* Word Biblical Commentary, vol. 33A (Dallas: Word Books, 1993), 324.